JULY 22, 2025

**AKASHAVANI - DHARWAD**

**PRADESH SAMACHARA (KANNADA) 7.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ಪಂಚ ಖಾತ್ರಿ ಯೋಜನೆ; ಸಾಂವಿಧಾನಾತ್ಮಕ ಮಾನವ ಹಕ್ಕುಗಳಾಗಿಸಲು, ರಾಜ್ಯ ಸರ್ಕಾರದ ಚಿಂತನೆ.**

**ಮಂಡ್ಯ ಜಿಲ್ಲೆಯಲ್ಲಿ 86 ಜನ, ಜೀತ ವಿಮುಕ್ತರು; ರಾಜ್ಯ ಸರ್ಕಾರದಿಂದ, 13 ಪ್ರಮುಖ ವಯಕ್ತಿಕ ದಾಖಲೆಗಳಲ್ಲಿ, ನೋಂದಣಿ.**

**ರಾಜ್ಯದ ಕೆರೆಗಳ ಮೇಲೆ, ತೇಲುವ ಸೌರ ಫಲಕ ಅಳವಡಿಕೆ; ಕಾರ್ಯಸಾಧ್ಯತಾ ವರದಿ, ಸರ್ಕಾರಕ್ಕೆ, ಸಲ್ಲಿಕೆ.**

**ಇಂದು, ರಾಷ್ಟ್ರೀಯ ಧ್ವಜ ದಿನಾಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯ ಸರ್ಕಾರ ಜಾರಿಗೊಳಿಸಿದ, ಪಂಚ ಖಾತ್ರಿ ಯೋಜನೆಗಳನ್ನು, ಸಾಂವಿಧಾನಾತ್ಮಕ ಮಾನವ ಹಕ್ಕುಗಳಾಗಿಸಲು, ರಾಜ್ಯ ಸರ್ಕಾರ ಚಿಂತನೆ ನಡೆಸಿದೆ ಎಂದು, ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ತಿಳಿಸಿದ್ದಾರೆ. ಗದಗ ನಾಗಾವಿಯ, ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ವಿಶ್ವವಿದ್ಯಾಲಯಲ್ಲಿ ಆಯೋಜಿಸಲಾಗಿದ್ದ, 'ಕವಲು ದಾರಿಯಲ್ಲಿ ಮಾನವ ಹಕ್ಕುಗಳು; ಭಾರತ ಹಾಗೂ ಪಶ್ಚಿಮ' ವಿಚಾರ ಸಂಕಿರಣ ಉದ್ಘಾಟಿಸಿ, ಅವರು ಮಾತನಾಡಿದರು.**

<><><>

**ಮಂಡ್ಯ ಜಿಲ್ಲೆಯಲ್ಲಿ 86 ಜನರನ್ನು, ಜೀತದಿಂದ ವಿಮುಕ್ತಿ ಗೊಳಿಸಿ, ಸರ್ಕಾರದ ವಿವಿಧ ಸೌಲಭ್ಯಗಳ ಮೂಲಕ, ಮುಖ್ಯವಾಹಿನಿಗೆ ತರಲಾಗುತ್ತಿದೆ; ಮುಗ್ಧ ಜನ, ಜೀತಕ್ಕೆ ಬಲಿಪಶುವಾಗದಂತೆ, ಜಾಗೃತಿ ಮೂಡಿಸಲಾಗುತ್ತಿದೆ ಎಂದು, ಜಿಲ್ಲಾ**

ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ. ಮದ್ದೂರಿನಲ್ಲಿ, ತಾಲೂಕಿನಲ್ಲಿ ಜೀತ ವಿಮುಕ್ತಿಗೊಂಡವರಿಗೆ, ಗುರುತಿನ ಚೀಟಿ ನೀಡಿ, ಅವರು ಮಾತನಾಡಿದರು. ಆಧಾರ್, ಇ ಶ್ರಮ್, ನರೇಗಾ ಉದ್ಯೋಗ ಚೀಟಿ, ಆರೋಗ್ಯ ಕಾರ್ಡ್ ಹಾಗೂ ಚುನಾವಣಾ ಗುರುತು ಪತ್ರ ಸೇರಿದಂತೆ, ಒಟ್ಟು 13 ವಯಕ್ತಿಕ ದಾಖಲೆಗಳನ್ನು ಒದಗಿಸಿ, ಜೀತ ವಿಮುಕ್ತರನ್ನು ಮುಖ್ಯ ವಾಹಿನಿಗೆ ಜೋಡಿಸಲಾಗುತ್ತಿದೆ ಎಂದರು.

<><><>

ರಾಜ್ಯ ವಿಧಾನಸಭೆ ಮಳೆಗಾಲದ ಅಧಿವೇಶನ, ಆಗಸ್ಟ್ 11 ರಿಂದ 22 ರ ವರೆಗೆ ನಡೆಯಲಿದೆ ಎಂದು, ವಿಧಾನಸಭಾಧ್ಯಕ್ಷ ಯು.ಟಿ ಖಾದರ್, ತಿಳಿಸಿದ್ದಾರೆ. ಮಂಗಳೂರಿನಲ್ಲಿ ಮಾತನಾಡಿದ ಅವರು, ದಕ್ಷಿಣಕನ್ನಡ ಜಿಲ್ಲೆ, ಮಂಗಳೂರು ವಿಧಾನಸಭಾ ಕ್ಷೇತ್ರದ, ಎಲ್ಲ ಸರ್ಕಾರಿ ಶಾಲೆಗಳಲ್ಲಿ, ಒಂದನೇ ತರಗತಿಯಿಂದ ಕನ್ನಡ ಮಾಧ್ಯಮದ ಜೊತೆ, ಆಂಗ್ಲ ಮಾಧ್ಯಮ, ಎಲ್.ಕೆ.ಜಿ. ಹಾಗೂ ಯು.ಕೆ.ಜಿ. ತರಗತಿ ಪ್ರಾರಂಭಿಸಲು, ಶಿಕ್ಷಣ ಇಲಾಖೆಗೆ ಸೂಚಿಸಿದ್ದಾಗಿ ಹೇಳಿದರು. ಮಂಗಳೂರಿಗೆ ಎರಡು ಮಹಿಳಾ ಮಹಾವಿದ್ಯಾಲಯಗಳು ಮಂಜೂರಾಗಿವೆ; ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ, 17 ಕೋಟಿ ರೂಪಾಯಿ ವೆಚ್ಚದಲ್ಲಿ, ಕಾಲೇಜುಗಳನ್ನು ನಿರ್ಮಿಸಲಿದೆ ಎಂದರು.

<><><>

ಈ ತಿಂಗಳ 30, 31 ಹಾಗೂ ಆಗಸ್ಟ್ 3 ರಂದು ಶಾಸಕರೊಂದಿಗೆ ಮುಖ್ಯಮಂತ್ರಿಯವರ ಖುದ್ದು ಸಮಾಲೋಚಿಸಲಿದ್ದಾರೆ ಎಂದು, ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ತಿಳಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ರಾಜ್ಯದ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ, ತಲಾ 50 ಕೋಟಿ ರೂಪಾಯಿ, ವಿಶೇಷ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ರಾಜ್ಯದ ಆರ್ಥಿಕ ಸ್ಥಿತಿ ಸುದೃಢವಾಗಿದೆ; ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯಮಂತ್ರಿ ಅವರು, ನಿರಂತರ ಅನುದಾನ ಒದಗಿಸುತ್ತಿದ್ದಾರೆ ಎಂದರು.

<><><>

ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ ಹಾಗೂ ನಗರದ ಕೆರೆಗಳಲ್ಲಿ, ತೇಲುವ ಸೌರ ವಿದ್ಯುತ್ ಫಲಕಗಳನ್ನು ಅಳವಡಿಸಲು, ಕಾರ್ಯಸಾಧ್ಯತಾ ವರದಿ ಸಲ್ಲಿಕೆಯಾಗಿದೆ; ಭಾರತ್ ಹೆವಿ ಇಲೆಕ್ಟ್ರಿಕಲ್ಸ್ ಲಿಮಿಟೆಡ್ ಮೂಲಕ, ಈ ಯೋಜನೆ ಕಾರ್ಯಗತವಾಗಲಿದೆ ಎಂದು, ಸಣ್ಣ ನೀರಾವರಿ ಖಾತೆ ಸಚಿವ, ಎನ್.ಎಸ್. ಬೋಸರಾಜು, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ. ಕೆರೆಗಳ ಮೇಲೆ ತೇಲುವ ಸೌರ ಫಲಕಗಳ ಅಳವಡಿಕೆಯಿಂದ, 2 ಸಾವಿರ ಮೆಗಾ ವ್ಯಾಟ್ ಸೌರ ವಿದ್ಯುತ್ ಉತ್ಪಾದನೆ ಗುರಿ ಇದೆ; ಏತ ನೀರಾವರಿ ಯೋಜನೆಯ, ಕೋಟ್ಯಂತರ ರೂಪಾಯಿ ವಿದ್ಯುತ್ ಶುಲ್ಕ, ಉಳಿತಾಯವಾಗಲಿದೆ ಎಂದಿದ್ದಾರೆ. ಕೆರೆಗಳ ಒತ್ತುವರಿ ಅತಿಕ್ರಮಣಕ್ಕೂ ಕಡಿವಾಣ ಬೀಳಲಿದೆ. ಜಲಮೂಲಗಳ ಸಂರಕ್ಷಣೆಯಾಗಲಿದೆ. ವಿದ್ಯುತ್ ಸ್ವಾವಲಂಬನೆ ಸಾಧ್ಯವಾಗಲಿದೆ, ಎಂದು ತಿಳಿಸಿದ್ದಾರೆ.

<><><>

ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲೂಕಿನ, ರೈತ ಉತ್ಪಾದಕರ ಸಂಘ ಎಫ್.ಪಿ.ಓ. 80 ಕೋಟಿ ರೂಪಾಯಿ ವಹಿವಾಟು ನಡೆಸುತ್ತಿರುವುದು, ಶ್ಲಾಘನೀಯ ಎಂದು, ಜಿಲ್ಲಾ ಉಸ್ತುವಾರಿ ಖಾತೆ ಸಚಿವ ಆರ್.ಬಿ. ತಿಮ್ಮಾಪೂರ, ಮೆಚ್ಚುಗೆ ವ್ಯಕ್ತ ಪಡಿಸಿದ್ದಾರೆ. ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ, ಕೃಷಿ, ತೋಟಗಾರಿಕೆ ಉತ್ಪನ್ನಗಳು ಹಾಗೂ ಸಿರಿಧಾನ್ಯ ಮೇಳ, ರೈತರೊಂದಿಗೆ ಸಂವಾದ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. ರೈತರ ಮೌಲ್ಯವರ್ಧಿತ

ಉತ್ಪನ್ನಗಳಿಗೆ, ಮಾರುಕಟ್ಟೆಯಲ್ಲಿ, ಉತ್ತಮ ಬೆಲೆ ದೊರಕಲು, ಬ್ರ್ಯಾಂಡಿಂಗ್ ಅಗತ್ಯ; ಸಮ್ಮೇಳನ ಹಾಗೂ ಸಂವಾದ ಕಾರ್ಯಕ್ರಮಗಳು, ಹೊಸ ಅವಕಾಶಗಳು, ಸ್ಥಳೀಯ ಬೆಳೆಗಳ ರಫ್ತಿಗೆ ಉತ್ತೇಜನ ಸಹ ದೊರಕಲಿದೆ ಎಂದರು.

<><><>

ಭದ್ರಾ ಬಲದಂಡೆ ಕಾಲುವೆಗೆ, ಇಂದಿನಿಂದ 120 ದಿನ ನೀರು ಹರಿಸಲಾಗುವುದು ಎಂದು, ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ಶಿವಮೊಗ್ಗದ ಮಲವಗೊಪ್ಪದ ಕಾಡಾ ಕಚೇರಿಯಲ್ಲಿ, ಭದ್ರಾ ನೀರಾವರಿ ಸಲಹಾ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ, ಅವರು ಸಭೆಯ ನಿರ್ಣಯ ಪ್ರಕಟಿಸಿದರು. ಎಡದಂಡೆ ನಾಲೆಯ ದುರಸ್ತಿ ಕಾರ್ಯವನ್ನು, ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸೂಚಿಸಲಾಗಿದೆ; ರೈತರ ಬೆಳೆಗಳಿಗೆ ನೀರೊದಗಿಸಲು, ಅಧಿಕಾರಿಗಳು ಬದ್ಧತೆಯಿಂದ ಕಾಮಗಾರಿ ಪೂರ್ಣ ಗೊಳಿಸಲು ಸೂಚಿಸಿದ್ದಾಗಿ, ಹೇಳಿದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರಿಯುವುದು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ

<><><>

ಇಂದು, ರಾಷ್ಟ್ರೀಯ ಧ್ವಜ ದಿನ. ಭಾರತದ ಏಕತೆ ಹಾಗೂ ಸ್ವಾಭಿಮಾನದ ಸಂಕೇತ, ತ್ರಿವರ್ಣ ಧ್ವಜ ಅಂಗೀಕಾರಗೊಂಡ ದಿನ. ಪಿಂಗಳಿ ವೆಂಕಯ್ಯ ಅವರು ರಚಿಸಿದ ಧ್ವಜವನ್ನು, 1947 ರ ಜುಲೈ 22 ರಂದು, ರಾಷ್ಟ್ರಧ್ವಜ ಎಂದು, ಸಂಸತ್ತು ಅಂಗೀಕರಿಸಿತು. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲೆ, ಗರಗ ಕ್ಷೇತ್ರೀಯ ಖಾದಿ ಸಂಘದ ಅಧ್ಯಕ್ಷ, ಬಸವಪ್ರಭು ಹೊಸಕೇರಿ. …

<><><>

ಬಸವಪ್ರಭು ಹೊಸಕೇರಿ ಧ್ವನಿ 77 ಸೆಕೆಂದುಗಳು

<><><>

ಕಂದಾಯ ಖಾತೆ ಸಚಿವ, ಕೃಷ್ಣ ಬೈರೇಗೌಡ, ಇಂದು, ಉತ್ತರಕನ್ನಡ ಜಿಲ್ಲೆಯ, ಶಿರಸಿ, ಕುಮಟಾ, ಶಿರೂರು ಸೇರಿದಂತೆ, ಮಳೆ ಬಾಧಿತ ಪ್ರದೇಶಗಳಿಗೆ ಭೇಟಿ ನೀಡಿ, ಪರಿಶೀಲಿಸಲಿದ್ದಾರೆ. ಇಂದು ಬೆಳಗ್ಗೆ 9 ರಿಂದ, ಮಧ್ಯಾಹ್ನ 2 ಗಂಟೆಯ ವರೆಗೆ, ಜಿಲ್ಲೆಯ ಭೂ ಕುಸಿತದ ಪ್ರದೇಶಗಳನ್ನು ಅವಲೋಕಿಸಲಿದ್ದಾರೆ. ಕುಮಟಾ ತಾಲೂಕು ಕಚೇರಿಗೂ ಭೇಟಿ ನೀಡಲಿದ್ದಾರೆ. ಬಳಿಕ, ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಕಂದಾಯ ಇಲಾಖೆ ಪ್ರಗತಿ ಪರಿಶೀಲಿಸಲಿದ್ದಾರೆ.

<><><>

ಯುವಜನತೆಯಲ್ಲಿ, ದೈಹಿಕ ಹಾಗೂ ಮಾನಸಿಕ ಸುದೃಢತೆ ಸಾಧಿಸುವಲ್ಲಿ, ಕ್ರೀಡೆಗಳು ಸಹಕಾರಿ ಎಂದು, ಬೀದರ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ. ಭಾಲ್ಕಿಯಲ್ಲಿ, 14 ಕೋಟಿ 75 ಲಕ್ಷ ರೂಪಾಯಿ ವೆಚ್ಚದಲ್ಲಿ

ನಿರ್ಮಾಣಗೊಂಡ, ರಾಷ್ಟ್ರ ಮಟ್ಟದ ಅತ್ಯಾಧುನಿಕ ಕ್ರೀಡಾ ಸಂಕೀರ್ಣವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಸ್ವಸ್ಥ ಮನೋಸ್ಥಿತಿ, ಕ್ರೀಡಾ ಮನೋಭಾವ ಯುವ ಸಮೂಹದ ಬದುಕನ್ನು ಅರಳಿಸಲಿದೆ. ಕ್ರೀಡೆ ಉತ್ತಮ ಮಾಧ್ಯಮ ಎಂದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಪಂಚ ಖಾತ್ರಿ ಯೋಜನೆ; ಸಾಂವಿಧಾನಾತ್ಮಕ ಮಾನವ ಹಕ್ಕುಗಳಾಗಿಸಲು, ರಾಜ್ಯ ಸರ್ಕಾರದ ಚಿಂತನೆ.

ಮಂಡ್ಯ ಜಿಲ್ಲೆಯಲ್ಲಿ 86 ಜನ, ಜೀತ ವಿಮುಕ್ತರು; ರಾಜ್ಯ ಸರ್ಕಾರದಿಂದ, 13 ಪ್ರಮುಖ ವಯಕ್ತಿಕ ದಾಖಲೆಗಳಲ್ಲಿ, ನೋಂದಣಿ.

ರಾಜ್ಯದ ಕೆರೆಗಳ ಮೇಲೆ, ತೇಲುವ ಸೌರ ಫಲಕ ಅಳವಡಿಕೆ; ಕಾರ್ಯಸಾಧ್ಯತಾ ವರದಿ, ಸರ್ಕಾರಕ್ಕೆ, ಸಲ್ಲಿಕೆ.

ಇಂದು, ರಾಷ್ಟ್ರೀಯ ಧ್ವಜ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ

<><><>